# ಕನ್ನಡ ವೃತ್ತಿರಂಗಭೂಮಿಯ ಧ್ರುವತಾರೆ: ರಹೆಮಾನವ್ವ

**ಡಾ. ಪ್ರವೀಣ ಪೋಲಿಸ ಪಾಟೀಲ**
ಉಪನ್ಯಾಸಕರು, ಕನ್ನಡ ವಿಭಾಗ,
ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ
ಸ್ನಾತಕೋತ್ತರ ಕೇಂದ್ರ, ಯಲಬುರ್ಗಾ–583236.
b.praveenppatil@gmail.com

**Article Link: https://aksharasurya.com/2023/07/praveen-police-patil/**

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಪ್ರಮುಖವಾದ ಸ್ಥಾನವನ್ನು ಪಡೆದುಕೊಂಡಿರುವ ಹೈದ್ರಾಬಾದ ಕರ್ನಾಟಕ ಪ್ರದೇಶವು ಕಲೆ, ಸಾಹಿತ್ಯ, ಸಂಸ್ಕೃತಿಯಲ್ಲಿ ಶ್ರೀಮಂತಿಕೆಯನ್ನು ಹೊಂದಿದೆ. ಕ್ರಿ.ಶ 7 ನೇಯ ಶತಮಾನದಿಂದ ನಿಜಾಮರ ಕಾಲದವರೆಗೂ ಈ ಭಾಗವನ್ನು ಶಾತವಾಹನರು, ಮೌರ್ಯರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಆದಿಲ್ ಶಾಹಿಗಳು, ಬಹುಮನಿ ಸುಲ್ತಾನರು ಹೀಗೆ ಅನೇಕ ರಾಜಮನೆತನಗಳು ಆಡಳಿತ ನಡೆಸಿವೆ. ಹೀಗಾಗಿ ಇಲ್ಲಿ ಆಯಾ ಕಾಲಘಟ್ಟದಲ್ಲಿ ಸಾಂಸ್ಕೃತಿಕ ಪಲ್ಲಟಗಳಾಗುತ್ತಾ ಬಂದಿವೆ. ಕನ್ನಡ ಸಾಹಿತ್ಯ ಚರಿತ್ರೆಗೆ ಮುನ್ನುಡಿ ಹಾಕಿದ 'ಕವಿರಾಜ ಮಾರ್ಗ'ಕಾರ ಕಲಬುರಗಿಯ ಮಾನ್ಯಖೇಟ (ಈಗೀನ ಮಳಖೇಡ)ದ ಶ್ರೀವಿಜಯನು. ಹಾಗೇನೆ ವಚನ ಸಾಹಿತ್ಯ, ದಾಸ ಸಾಹಿತ್ಯ, ತತ್ವಪದ ಸಾಹಿತ್ಯಕ್ಕೆ ಬುನಾದಿ ಹಾಕಿ ಬೃಹತ್ ಬಂಗಲೆಯನ್ನು ನಿರ್ಮಿಸಿದ ಹಿರಿಮೆ ಈ ಭಾಗದ್ದಾಗಿದೆ.

ಹೈದ್ರಾಬಾದ ಕರ್ನಾಟಕ ರಂಗಭೂಮಿ ಪರಂಪರೆಯು ಕನ್ನಡ ರಂಗಭೂಮಿ ಪರಂಪರೆಯಲ್ಲಿ ತುಂಬಾ ಮಹತ್ವವನ್ನು ಪಡೆದುಕೊಂಡಿದೆ. ರಂಗಭೂಮಿಯ ಪ್ರಕಾರಗಳಾದ ಜನಪದ ರಂಗಭೂಮಿ, ವೃತ್ತಿರಂಗಭೂಮಿ ಹಾಗೂ ಹವ್ಯಾಸಿ ರಂಗಭೂಮಿಗಳಲ್ಲಿ, ಈ ಜನಪದ ರಂಗಭೂಮಿಯ ಪ್ರಕಾರಗಳಾದ ದೊಡ್ಡಾಟ, ಸಣ್ಣಾಟ (ಡಪ್ಪಿನಾಟ)ಗಳು ಈ ಭಾಗದಲ್ಲಿ ಬೆಳೆದು ಬಂದಿವೆ. ಅಲ್ಲದೇ ವೃತ್ತಿ ರಂಗಭೂಮಿಯಲ್ಲಿಯೂ ಕೂಡಾ ಹೈದ್ರಾಬಾದ ಕರ್ನಾಟಕ ಪ್ರದೇಶವು ತನ್ನದೇ ಆದ ಗುರುತನ್ನು ಉಳಿಸಿಕೊಂಡಿದೆ. ವೃತ್ತಿರಂಗಭೂಮಿಗೆ ಸಂಬಂಧಿಸಿದಂತೆ ಇಲ್ಲಿ ಮಹತ್ವದ ಸಂಗತಿಗಳಿವೆ. "ಈ ಭಾಗದ ಮೊಟ್ಟ ಮೊದಲ ನಾಟಕ ಕಂಪನಿಯೆಂದರೆ ಕೊಪ್ಪಳದ ವೆಂಕೋಬರಾಯರ (ಶಿರಹಟ್ಟಿ ವೆಂಕೋಬರಾಯರು)

'ಶ್ರೀ ಮಹಾಲಕ್ಷ್ಮೀ ಪ್ರಾಸಾದಿತ ನಾಟಕ ಮಂಡಳಿ'. ಈ ನಾಟಕ ಕಂಪನಿಯು 1903 ರಲ್ಲಿ ಸ್ಥಾಪನೆಯಾಯಿತು. ಕರ್ನಾಟಕದ ವೃತ್ತಿರಂಗಭೂಮಿ ನಾಟಕ ಕಂಪನಿಗಳಲ್ಲಿ ಗದುಗಿನ ಶಾಂತ ಕವಿಗಳಿಂದ 1872 ರಲ್ಲಿ ಪ್ರಾರಂಭವಾದ 'ಶ್ರೀ ವೀರನಾರಾಯಣ ಪ್ರಾಸಾದಿತ ಕೃತಪುರ ನಾಟಕ ಮಂಡಳಿ' ಮಹತ್ವದ ನಾಟಕ ಮಂಡಳಿಯಾಗಿದೆ. ಶಾಂತ ಕವಿಗಳನ್ನು ಕರ್ನಾಟಕದ ವೃತ್ತಿರಂಗಭೂಮಿಯ ಪಿತಾಮಹರೆಂದು ಕರೆಯಲಾಗಿದೆ.

ಇದೇ ಸಂದರ್ಭದಲ್ಲಿ ಕರ್ನಾಟಕದಲ್ಲಿ ಪ್ರಸಿದ್ಧಿ ಪಡೆದದ್ದು ವೀರಣ್ಣನವರ ನೇತೃತ್ವದ ಗುಬ್ಬಿ ಕಂಪನಿ. ಗುಬ್ಬಿ ಕಂಪನಿಯು 1917 ರಲ್ಲಿ ವೀರಣ್ಣನವರ ಸ್ವಾಧೀನಕ್ಕೆ ಬಂದಿತು. ಆದರೆ ಅದಕ್ಕಿಂತ 14 ವರ್ಷ ಮೊದಲು ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ವೆಂಕೋಬರಾಯರ 'ಶ್ರೀ ಮಹಾಲಕ್ಷ್ಮೀ ಪ್ರಾಸಾದಿತ ಸಂಗೀತ ನಾಟಕ ಮಂಡಳಿ' ಅನೇಕ ನಾಟಕಗಳನ್ನು ಪ್ರಯೋಗಿಸಿ ಜನಪ್ರಿಯವಾಗಿತ್ತು. ಆದರೆ ಇದನ್ನು ಯಾವ ರಂಗ ವಿಮರ್ಶಕರೂ ಗಮನಿಸುವುದಿಲ್ಲ. ಗುಬ್ಬಿ ಕಂಪನಿಗಿಂತ ವೆಂಕೋಬರಾಯರ ಕಂಪನಿ ಎಲ್ಲ ಹಂತದಲ್ಲೂ ಮುಂದಿತ್ತು. ಆದರೆ ಗುಬ್ಬಿ ಕಂಪನಿಯಲ್ಲಿ ಡಾ. ರಾಜಕುಮಾರ, ಬಾಲಕೃಷ್ಣ, ನರಸಿಂಹರಾಜು ಅವರಂತಹ ಮಹತ್ವದ ನಟರಿದ್ದರು. ಮುಂದೆ ಅವರು ಚಲನಚಿತ್ರ ಕ್ಷೇತ್ರವನ್ನು ಪ್ರವೇಶಿಸಿದರು. ಹೀಗಾಗಿ ಗುಬ್ಬಿ ಕಂಪನಿ ರಾಜ್ಯ ಮಟ್ಟದಲ್ಲಿ ಹೆಸರುವಾಸಿಯಾಯಿತು".[1] ಈ ಮಾತು ಅಕ್ಷರಷಃ ಸತ್ಯವೆನಿಸುತ್ತದೆ. ಯಾಕೆಂದರೆ ಅಂತಹ ಪ್ರತಿಭಾವಂತ ಕಲಾವಿದರು ಇಲ್ಲಿರುವುದನ್ನು ಕಾಣುತ್ತೇವೆ. ಆದರೆ ಅವರ ಪ್ರತಿಭೆಯನ್ನು ಗುರುತಿಸುವ ಮಹತ್ವದ ಕೆಲಸವಾಗಲಿ, ಅವರಿಗೆ ವೇದಿಕೆಯನ್ನು ಕಲ್ಪಿಸುವ ಗುರುತರವಾದ ಜವಾಬ್ದಾರಿಯನ್ನು ಸರ್ಕಾರವನ್ನೊಳಗೊಂಡಂತೆ ಯಾವ ಸಂಘ ಸಂಸ್ಥೆಗಳಾಗಲಿ, ರಾಜಮನೆತನಗಳಾಗಲಿ ಮಾಡಲಿಲ್ಲ.

ಪ್ರತಿಭೆಯೆಂಬುದು ಅದು ಯಾವ ರಂಗಶಾಲೆಯಿಂದಲೂ ಬರುವಂಥದಲ್ಲ, ಹಾಗೇನೆ ಅದು ಯಾರ ಸ್ವತ್ತೂ ಅಲ್ಲ. ನಿರಂತರ ಶ್ರಮ, ಶ್ರದ್ಧೆ, ಅರ್ಪಣೆ ಭಾವ, ಕಠಿಣ ತಪಸ್ಸಿನಿಂದ ಪ್ರತಿಭೆಯು ಒಬ್ಬ ಕಲಾವಿದನಲ್ಲಿ ಸ್ಥಾಯಿಯಾಗಿ ಉಳಿಯುತ್ತದೆ. ಇಂತಹ ಪ್ರತಿಭೆಯನ್ನು ಹುಟ್ಟಿನಿಂದಲೇ ವರವನ್ನಾಗಿ ಪಡೆದುಕೊಂಡು ಬಂದ ನಟಿ ಕುಕನೂರಿನ ರಹೆಮಾನವ್ವ ಕಲ್ಮನಿಯವರು. 'ಒಬ್ಬ ನಾಟಕಕಾರ ಬರೆದಿರುವ ಹತ್ತು ಸಾಲುಗಳ ಮಧ್ಯೆ ಬರೆಯದೇ ಇರುವ ನೂರಾರು ಸಾಲುಗಳಿರುತ್ತವೆ', ಅಂತಹ ನೂರಾರು ಸಾಲುಗಳನ್ನು ರಂಗದ ಮೇಲೆ ಒಬ್ಬ

ನಟ/ನಟಿ ಸಾಬೀತುಪಡಿಸುತ್ತಾರೆ. ಅಂತಹ ಸಾಮರ್ಥ್ಯವನ್ನು ತಮ್ಮ ಸಾಧನೆಯ ಮೂಲಕ ಒಬ್ಬ ಮಹಿಳೆಯಾಗಿ ರಹೆಮಾನವ್ವ ಮಾಡಿ ತೋರಿಸಿದ್ದಾರೆ.

ಕನ್ನಡ ವೃತ್ತಿರಂಗಭೂಮಿಯ ಧೃವತಾರೆಯಾಗಿ ಮಿನುಗಿದ ನಟಿ ರಹೆಮಾನವ್ವ ಕುಕನೂರು. ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ಕುಕನೂರಿನಲ್ಲಿ 1917ರಲ್ಲಿ ಜನಿಸಿದರು. ಒಂಭತ್ತು ತಿಂಗಳ ಮಗುವಿದ್ದಾಗಲೇ ತಾಯಿಯನ್ನು ಕಳೆದುಕೊಂಡು ಅಜ್ಜಿ ಹಸನವ್ವಳ ಆರೈಕೆಯಲ್ಲಿ ಬೆಳೆದಳು. ಎಂಟು ವರ್ಷದವಳಿದ್ದಾಗ ಎಮ್ಮೆ ಕಾಯುತ್ತಿದ್ದ ಈಕೆ ತನ್ನೂರಿನಲ್ಲಿ ನಡೆಯುತ್ತಿದ್ದ ನಾಟಕಗಳನ್ನು ನೋಡಿ ಪ್ರಭಾವಿತಳಾಗಿದ್ದಳು. ಸ್ವತಃ ಏಕಪಾತ್ರವನ್ನು ಮಾಡುತ್ತಲೇ ಅಭಿನಯವನ್ನು ಕಲಿತಳು. 14 ವರ್ಷದವಳಿದ್ದಾಗಲೇ ಬಣ್ಣ ಹಚ್ಚಿಕೊಂಡ ಈಕೆ ಕನ್ನಡ ವೃತಿ ್ತರಂಗಭೂಮಿಯ ವೈಭವದ ದಿನಗಳಲ್ಲಿ ರಂಗ ಸಾಮ್ರಾಜ್ಞಿಯಾಗಿ ಮೆರೆದಳು. ಹಂದಿಗನೂರು ಸಿದ್ರಾಮಪ್ಪನವರ ನಾಟಕ ಮಂಡಳಿ, ವಿಶ್ವಗುಣಾದರ್ಶನಾಟಕ ಮಂಡಳಿ, ಏಣಗಿ ಬಾಳಪ್ಪನವರ ಕಂಪನಿಯಲ್ಲಿ ನಟಿಯಾಗಿ, ಗಾಯಕಿಯಾಗಿ ತನ್ನನ್ನು ಗುರುತಿಸಿಕೊಂಡಳು. ಅಂದಿನಿಂದ ಯಾವತ್ತೂ ತಿರುಗಿ ನೋಡದ ಹಾಗೆ ಯಶಸ್ಸು ಈಕೆಯನ್ನು ಕರೆದುಕೊಂಡು ಹೋಯಿತು. ಅಪ್ರತಿಮ ಸುಂದರಿಯಾಗಿದ್ದ ಈಕೆ ರಂಗಭೂಮಿಯಲ್ಲಿನ ಯಾವುದೇ ಪಾತ್ರಕ್ಕೂ ಹೇಳಿಮಾಡಿಸಿದ ಶಿಲ್ಪ ಕಲಾಕೃತಿಯಾಗಿದ್ದಳು. 'ಅಕ್ಷಯಾಂಬರ', 'ಭೀಷ್ಮಪ್ರತಿಜ್ಞೆ, 'ಚಿತ್ರಾಂಗದ', 'ಉತ್ತರಭೂಪ' ದಂತಹ ಪೌರಾಣಿಕ ನಾಟಕಗಳಲ್ಲಿ ನಾಯಕಿ ಪಾತ್ರಗಳನ್ನು ಮಾಡುವುದರೊಂದಿಗೆ ಗಮನ ಸೆಳೆದಳು. ಹಾಗೇನೆ 'ಕಿತ್ತೂರ ಚೆನ್ನಮ್ಮ' ನಾಟಕದ ಚೆನ್ನಮ್ಮನ ಪಾತ್ರ ಈಕೆಗೆ ಹೆಸರು ತಂದುಕೊಟ್ಟಿತು.

1942ರಲ್ಲಿ 'ಲಲಿತಕಲಾ ನಾಟ್ಯಸಂಘ' ವನ್ನು ಕುಕನೂರಿನಲ್ಲಿ ಸ್ಥಾಪನೆ ಮಾಡಿದಳು. ಪಿ.ಬಿ. ಧುತ್ತರಗಿಯವರ 'ತಾಯಿಯ ಕರುಳು' ನಾಟಕವನ್ನು ತಮ್ಮ ಕಂಪನಿಯ ಮೂಲಕ ರಂಗಕ್ಕೆ ತಂದರು. ಅಂದಿನಿಂದ ಧುತ್ತರಗಿಯವರ ಹೆಸರು ರಂಗಭೂಮಿಯಲ್ಲಿ ಜನಪ್ರಿಯವಾಯಿತು. ಈಕೆಯ ಅಭಿನಯಕ್ಕೆ ಮನಸೋತ ಕುಕನೂರಿನ ಶ್ರೀ ನಂದರಾಜ ಮೇವುಂಡಿಯವರು ರಹೆಮಾನವ್ವಳನ್ನು ಪತ್ನಿಯಾಗಿ ಸ್ವೀಕರಿಸಿದರು. ಪತಿಯ ಸಹಕಾರದಿಂದ ನಾಡಿನಾದ್ಯಂತ ಕಂಪನಿ ಸಂಚಾರ ಮಾಡಿತು. 'ಸ್ತ್ರೀರತ್ನ', 'ಭಕ್ತಪ್ರಹ್ಲಾದ', 'ಲಂಕಾದಹನ', 'ಪ್ರಪಂಚ ಪರೀಕ್ಷೆ', 'ಸಹೋದರಿ', 'ಮಲಮಗಳು', 'ತಾಯಿ ಕರುಳು' ಇವು ಕಂಪನಿಯ ಪ್ರಸಿದ್ಧ ನಾಟಕಗಳಾಗಿದ್ದವು. ಕಂಪನಿಯ ಮಾಲಿಕಳಾಗಿ, ನಟಿಯಾಗಿ ಇಡೀ ರಾಜ್ಯದ

ತುಂಬಾ ತಮ್ಮ ಕಂಪನಿಯ ಕಂಪನ್ನು ಪಸರಿಸಿದ ಹೆಗ್ಗಳಿಕೆ ಇವರದು. ಆ ಸಂದರ್ಭದಲ್ಲಿ ಇಡೀ ಉತ್ತರ ಕರ್ನಾಟಕದಲ್ಲಿಯೇ ಐಕೈಕ ಮಹಿಳಾ ಕಂಪನಿ ಇವರದ್ದಾಗಿತ್ತು. ಪುರುಷರ ಕಂಪನಿಗಳಿಗೇ ಸವಾಲೆನಿಸಿದ ಕಂಪನಿ ಇವರದಾಗಿ ಮೆರೆಯಿತು. "ರಹೆಮಾನವ್ವ ಹುಟ್ಟಿದ್ದು ಮುಸ್ಲಿಂಳಾಗಿ, ಆಕೆ ಬೆಳೆದದ್ದು ದಿಟ್ಟ ಕನ್ನಡತಿಯಾಗಿ. ನಾಟಕದ ಸಂಭಾಷಣೆಗಳನ್ನು ರಹೆಮಾನವ್ವನಷ್ಟು ಸ್ಪಷ್ಟವಾಗಿ, ಶುದ್ಧವಾಗಿ ಉಚ್ಚಾರಣೆಯನ್ನು ಅಂದಿನ ಉಳಿದ ನಟಿಯರು ಮಾಡುತ್ತಿರಲಿಲ್ಲ. ಹೀಗಾಗಿ ರಹೆಮಾನವ್ವ ಮುಸ್ಲೀಂ ಸಮುದಾಯಕ್ಕೆ ಸೇರಿದವಳೆಂಬುದು ಗಣನೆಗೇ ಬರುತ್ತಿರಲಿಲ್ಲ. ರಂಗಭೂಮಿಯಲ್ಲಿ ಆಕೆ ಹಿಂದೂ-ಮುಸ್ಲಿಂ ಆಗಿರದೆ ಬಹುದೊಡ್ಡ ಅಭಿನೇತ್ರಿಯಾಗಿದ್ದರು. ಅಭಿನಯದ ಜೊತೆಗೆ ಹಾಡುಗಾರಿಕೆಗೂ ಹೆಸರಾಗಿದ್ದಳು. ಹಿಂದಿನ ರಂಗಭೂಮಿಯ ಕಲಾವಿದರಾಗಿದ್ದ ಹಂದಿಗನೂರು ಸಿದ್ರಾಮಪ್ಪ ಮತ್ತು ಗರುಡರು ಹಾಗೂ ಏಣಗಿ ಬಾಳಪ್ಪ ಇವರೆಲ್ಲ ಈಕೆಯ ಅಭಿನಯವನ್ನು ಮೆಚ್ಚಿಕೊಂಡಿದ್ದರು."[2]

ಕಲೆ ಎಲ್ಲಾ ಜಾತಿ, ಧರ್ಮಗಳನ್ನು ಮೀರಿರುವಂತಹದ್ದು ಎಂಬುದಕ್ಕೆ ಈ ಮೇಲಿನ ಮಾತು ಸಾಕ್ಷಿಯಾಗಿ ನಿಲ್ಲುತ್ತದೆ. ಹತ್ತುಜನ ಮಕ್ಕಳನ್ನು ಪಡೆದಿದ್ದ ಈಕೆಯ ಕುಟುಂಬವೇ ರಂಗಭೂಮಿ ಸೇವೆಗೆ ಮುಡಿಪಾಗಿತ್ತು. ಲಲಿತಮ್ಮ, ಮಂಜುಳಾ ಈ ಇಬ್ಬರು ತಾಯಿಯಷ್ಟೇ ಹೆಸರು ಮಾಡಿದ್ದರು. ಆದರೆ ದುರ್ವಿಧಿ ಅವರನ್ನು ಕಾರು ಅಪಘಾತದಲ್ಲಿ ಇಹಲೋಕ ತ್ಯಜಿಸುವಂತೆ ಮಾಡಿತು. ಹಾಗೇನೆ 1966ರಲ್ಲಿ ಆದೋನಿಯ ಬದನ್ಯಾಳದಲ್ಲಿ ಕ್ಯಾಂಪ್ ಮಾಡಿದ್ದಾಗ ವಿದ್ಯುತ್ ತಂತಿಗಳ ಸಂಪರ್ಕದಿಂದ ಬೆಂಕಿ ಹತ್ತಿ ಇಡೀ ಕಂಪನಿಯೇ ಸುಟ್ಟುಹೋಯಿತು. ಆದರೂ ಕೂಡಾ ಎದೆಗುಂದದೆ ನರಸಿಂಗಭಾನು ಎನ್ನುವ ಹಾರ್ಮೋನಿಯಂ ಕಲಾವಿದರ ಸಹಕಾರದಿಂದ ಮತ್ತೆ ಕಂಪನಿಯನ್ನು ಕಟ್ಟಿದಳು.

ಹೀಗೆ ರಂಗಭೂಮಿಯ ಬದುಕು ತಂದಂತಹ ಹಲವು ತಿರುವುಗಳಿಂದ ಈಕೆ ಬದುಕಿನ ಎಲ್ಲ ಏರಿಳಿತಗಳನ್ನು ಅನುಭವಿಸಿದಳು. ಈಕೆಯ ಪ್ರಾಮಾಣಿಕತೆ, ರಂಗಬದ್ಧತೆಗೆ ಆಕೆಯ ಜೀವನದಲ್ಲಿ ನಡೆದ ಒಂದು ಘಟನೆಯನ್ನು ನೆನಪಿಸಿಕೊಳ್ಳಲೇಬೇಕು. ಅದೇನೆಂದರೆ, "ರಾಯಚೂರು ಜಿಲ್ಲೆಯ ಮುದಗಲ್ ಗ್ರಾಮ ಮೊಹರಂ ಹಬ್ಬಕ್ಕೆ ಬಹಳಷ್ಟು ಪ್ರಸಿದ್ಧ. ಸಾವಿರಾರು ಜನ ಹಳ್ಳಿಗರು ಅಲ್ಲಿ ಸೇರಿರುತ್ತಾರೆ. ಆ ಸಂದರ್ಭದ್ಲಲಿ ನಾಟಕ, ದೊಡ್ಡಾಟಗಳಂಥ ಮನರಂಜನೆಗಳು ಜರುಗುತ್ತಿರುತ್ತವೆ. ಒಮ್ಮೆ ಆ ಊರಿನಲ್ಲಿ ರಹೆಮಾನಮ್ಮನವರ ಕಂಪನಿಯ 'ಸತ್ಯ

ಹರಿಶ್ಚಂದ್ರ' ನಾಟಕ ನಡೆದಿತ್ತು. ಡಿ.ದುರ್ಗಾದಾಸ ಹರಿಶ್ಚಂದ್ರನಾಗಿ, ಎಲಿವಾಳ ಸಿದ್ದಯ್ಯ ನಕ್ಷತ್ರಕನಾಗಿ, ರಹಿಮಾನಮ್ಮ ತಾರಾಮತಿಯಾಗಿ ರಂಗದಲ್ಲಿ ಕಾಣಿಸಿಕೊಂಡಿದ್ದರು. ಪತ್ನಿ ತಾರಾಮತಿಯನ್ನು ಮಾರಾಟ ಮಾಡುತ್ತಿದ್ದ ಸನ್ನಿವೇಶ, ಮಗ ಲೋಹಿತಾಶ್ವ ತಾಯಿಯನ್ನು ತಬ್ಬಿಕೊಂಡು ಅಳುತ್ತಿದ್ದಾನೆ. ತಾರಾಮತಿಗೆ ಪತಿಯ ಸತ್ಯತೆಯನ್ನು ರಕ್ಷಿಸುವಲ್ಲಿ ಆಜ್ಞಾಧಾರಕಳಾಗಿ ಎಲ್ಲವನ್ನೂ ಸಹಿಸಿಕೊಂಡು ನಿಂತಿದ್ದಾಳೆ. ವಾಸ್ತವಿಕವಾಗಿ ತುಂಬು ಗರ್ಭಿಣಿಯಾಗಿದ್ದ ರಹಿಮಾನಮ್ಮ ಬರುತ್ತಿರುವ ಹೆರಿಗೆ ನೋವನ್ನು ಸಹಿಸುತ್ತ ಪ್ರೇಕ್ಷಕರಿಗೆ ತೊಂದರೆ ಕೊಡದೆ ಅಭಿನಯಿಸುತ್ತಿದ್ದರು. ಸನ್ನಿವೇಶ ಮುಗಿದು ಪರದೆ ಬಿದ್ದಾಗ ರಹಿಮಾನಮ್ಮ ಹೆಣ್ಣು ಮಗುವಿಗೆ ಜನ್ಮ ನೀಡಿದಳು. ಮತ್ತೆ ಮುಂದಿನ ಸನ್ನಿವೇಶಕ್ಕೆ ರಂಗಭೂಮಿಗೆ ಸಿದ್ಧ". ಇದು ಕಲಾವಿದರ ನಿಷ್ಠೆಯನ್ನು ತೋರಿಸುವಂತಹದ್ದು. ಒಬ್ಬ ಮಹಿಳೆಯಾಗಿ ಸಾಮಾಜಿಕವಾಗಿ, ವೈಯಕ್ತಿಕವಾಗಿ ಎಷ್ಟೇ ನೋವು, ಹಿಂಸೆಗಳನ್ನು ಅನುಭವಿಸಿದರು ಕೂಡಾ ಅವರ ರಂಗನಿಷ್ಠೆ ಮೆಚ್ಚುವಂತಹದ್ದೆ. ಇದು ರಂಗಭೂಮಿಯೊಂದಿಗೆ ಅವರು ಬೆಸೆದುಕೊಂಡಿರುವ ನಂಟನ್ನು, ರಂಗಭೂಮಿಯನ್ನೇ ತಮ್ಮ ಜೀವಾಳವಾಗಿಸಿದ್ದುಕೊಂಡುದರ ಬಗ್ಗೆ ತೋರಿಸಿಕೊಡುತ್ತದೆ.

ಹೀಗೆ ವೃತ್ತಿರಂಗಭೂಮಿಯಲ್ಲಿ ನಟಿಯಾಗಿ, ಕಂಪನಿಯ ಮಾಲಿಕಳಾಗಿ ಮೆರೆದ ರಹಿಮಾನವ್ವ ತನ್ನ ಕೌಟುಂಬಿಕ ಜೀವನದ ಕೊನೆಯ ದಿನಗಳನ್ನು ತುಂಬಾ ಬಡತನದಲ್ಲೇ ಕಳೆದಳು. ಈಕೆಯ ಪ್ರತಿಭೆಯನ್ನು ಗುರುತಿಸಿ ಕೆಲವು ಪ್ರಶಸ್ತಿಗಳು ಬಂದವು. ಆದರೆ ಕೊನೆಯ ದಿನಗಳಲ್ಲಿ ಈಕೆಯ ನೆರವಿಗೆ ಯಾರೂ ಬರಲಿಲ್ಲ ಎಂಬುದು ತುಂಬಾ ಶೋಚನೀಯ. 1993ರಲ್ಲಿ ಈಕೆ ಇಹಲೋಕವನ್ನು ತ್ಯಜಿಸಿದಳು. ಪ್ರಸ್ತುತ ಆಧುನಿಕ ಕನ್ನಡ ರಂಗಭೂಮಿಯು ಹೊಸತನದ ಪ್ರಯೋಗಗಳಿಂದ ತುಂಬಾ ಶ್ರೀಮಂತವಾಗಿದೆ. ರಂಗಭೂಮಿಯ ಎಲ್ಲ ವಿಭಾಗಗಳಲ್ಲಿ ಮಹಿಳೆ ತನ್ನ ಪಾತ್ರವನ್ನು ನಿರ್ವಹಿಸುತ್ತಿದ್ದಾಳೆ. ಆದರೆ ಮಹಿಳಾ ನಾಟಕಕಾರ್ತಿಯರ ಕೊರತೆ ತುಂಬಾ ಇದೆ. ಹಾಗೆ ನೋಡಿದರೆ ಆಧುನಿಕ ಕನ್ನಡ ರಂಗಭೂಮಿಯಲ್ಲಿ ನಾಟಕಕಾರರ ಕೊರೆತೆ ಎದ್ದು ಕಾಣುತ್ತಿದೆ. ಆದರೆ ನಿರ್ದೇಶಕರ ನೂತನ ಪ್ರಯೋಗಶೀಲತೆಯ ಗುಣದಿಂದ ಇಂದು ನೂತನ ರಂಗಪ್ರಯೋಗಗಳಾಗುತ್ತಿವೆ. ಇತ್ತೀಚೆಗೆ ಬಂದ ಕೊರೋನಾದಂತಹ ಭಯಾನಕ ರೋಗದಿಂದ ಎಲ್ಲವೂ ನಿಷ್ಕ್ರೀಯವಾಗಿದೆ. ನಾಟಕಗಳ ಪ್ರದರ್ಶನಗಳಿಲ್ಲದೇ ರಂಗಭೂಮಿ ಕಲಾವಿದರ ಜೀವನ ಶೋಚನೀಯವಾಗಿದೆ. ಹೀಗಾಗಿ ಇಂತಹ ಸಂದರ್ಭಗಳಲ್ಲಿ ಸರ್ಕಾರದ

ನೆರವಿನದೊಂದಿಗೆ ಸಾರ್ವಜನಿಕರೂ ಕೂಡ ರಂಗಕಲಾವಿದರಿಗೆ ನೆರವಾಗಬೇಕಾದ ಅಗತ್ಯತೆ ಇದೆ. ಇದರಿಂದ ನಮ್ಮ ಕಲೆ, ಸಾಹಿತ್ಯ, ಸಂಸ್ಕೃತಿ, ಪರಂಪರೆಯನ್ನು ಉಳಿಸಿದಂತಾಗುತ್ತದೆ.

**ಕೊನೆ ಟಿಪ್ಪಣಿಗಳು**

1. ಹೈದ್ರಾಬಾದ ಕರ್ನಾಟಕ ರಂಗಭೂಮಿ, ಡಾ. ಬಸವರಾಜ ಸಬರದ, ಪು–138.
2. ವೃತ್ತಿರಂಗಭೂಮಿಗೆ ಉತ್ತರ ಕರ್ನಾಟಕದ ಮಹಿಳೆಯರ ಕೊಡುಗೆ, ದೇವಕನ್ನಿಕಾ ಡಿ. ನಗರಕರ, ಪು–70.